**ನಿಗಮದ ಕೇಂದ್ರ ಕಛೇರಿಯಲ್ಲಿ ಶ್ರೀ ಎ. ಆರ್ ಕೃಷ್ಣಮೂರ್ತಿ, ಅಧ್ಯಕ್ಷರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ:23ನೇ ಫೆಬ್ರವರಿ 2011ರಂದು ಪೂರ್ವಾಹ್ನ:11.00ಗಂಟೆಗೆ ಜರುಗಿದ 182ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿ:**

**ಉಪಸ್ಥಿತರು:**

**ಹೆಸರು ಮತ್ತು ಪದನಾಮ**

| | |
|---|---|
| ಶ್ರೀ. ಎ.ಆರ್. ಕೃಷ್ಣಮೂರ್ತಿ | ಮಾನ್ಯ ಅಧ್ಯಕ್ಷರು |
| ಶ್ರೀ ಇ. ವೆಂಕಟಯ್ಯ, ಭಾ ಆ ಸೇ.,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು<br>ಸಮಾಜ ಕಲ್ಯಾಣ ಇಲಾಖೆ<br>ಕರ್ನಾಟಕ ಸರ್ಕಾರ | ನಿರ್ದೇಶಕರು |
| ಶ್ರೀ ಎನ್ ಮಂಜುನಾಥ್ ಪ್ರಸಾದ್, ಭಾ ಆ ಸೇ.,<br>ಆಯುಕ್ತರು<br>ಸಮಾಜ ಕಲ್ಯಾಣ ಇಲಾಖೆ,<br>ಕರ್ನಾಟಕ ಸರ್ಕಾರ | ನಿರ್ದೇಶಕರು |
| ಶ್ರೀ ಸೆಲ್ವಕುಮಾರ್, ಭಾ ಅ ಸೇ., | ವ್ಯವಸ್ಥಾಪಕ ನಿರ್ದೇಶಕರು |
| ಶ್ರೀ ಮುನಿಯಲ್ಲಪ್ಪ<br>ಸರ್ಕಾರದ ಅಪರ ಕಾರ್ಯದರ್ಶಿಗಳು<br>ಆರ್ಥಿಕ ಇಲಾಖೆ,<br>ಕರ್ನಾಟಕ ಸರ್ಕಾರ | ನಿರ್ದೇಶಕರು |
| ಶ್ರೀ ಸೋಮ್ಲಾನಾಯಕ್<br>ವ್ಯವಸ್ಥಾಪಕ ನಿರ್ದೇಶಕರು<br>ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ | ನಿರ್ದೇಶಕರು |

ಶ್ರೀ ಸೆಲ್ವಕುಮಾರ್, ವ್ಯವಸ್ಥಾಪಕ ನಿರ್ದೇಶಕರು, ಡಾ: ಬಿ ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ರವರು, ಸಭೆಗೆ ಆಗಮಿಸಿದ್ದ ನಿಗಮದ ಮಾನ್ಯ ಅಧ್ಯಕ್ಷರು, ಶ್ರೀ ಇ. ವೆಂಕಟಯ್ಯ, ಭಾ ಆ ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶ್ರೀ ಎನ್ ಮಂಜುನಾಥ್ ಪ್ರಸಾದ್, ಭಾ ಆ ಸೇ., ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಶ್ರೀ ಮುನಿಯಲ್ಲಪ್ಪ, ಸರ್ಕಾರದ ಅಪರ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಹಾಗೂ ಶ್ರೀ ಸೋಮ್ಲಾನಾಯಕ್, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ, ಎಲ್ಲರಿಗೂ ಹಾರ್ದಿಕ ಸ್ವಾಗತ ಬಯಸಿದರು.

ಶ್ರೀ ಎ ಆರ್ ಕೃಷ್ಣಮೂರ್ತಿ, ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಉಪಸ್ಥಿತರೆಲ್ಲರನ್ನು ಹಾರ್ದಿಕವಾಗಿ ಸ್ವಾಗತಿಸುತ್ತಾ, ಸಭೆಯ ಕಾರ್ಯಸೂಚಿಯ ಬಗ್ಗೆ ಚರ್ಚಿಸುವುದರೊಂದಿಗೆ ಸಭೆಯನ್ನು ಪ್ರಾರಂಭಿಸಿದರು.

ನಿಗಮದ ಅಧಿಕಾರಿಗಳ ಕಾರ್ಯಚಟುವಟಿಕೆಗಳ ಬಗ್ಗೆ ಅತೃಪ್ತಿಯನ್ನು ವ್ಯಕ್ತಪಡಿಸುತ್ತಾ, ಅಧಿಕಾರಿಗಳು ಮಂಡಳಿ ಸಭೆಯನ್ನು ಕರೆಯುವ ಮೊದಲು ಪೂರ್ವಭಾವಿ ಸಭೆಯ ನಂತರ ಸಭೆಯ ಕಾರ್ಯಸೂಚಿಯನ್ನು ತಯಾರಿಸಲು ತಿಳಿಸಿದರೂ ಸಹ ಅಧ್ಯಕ್ಷರ ಗಮನಕ್ಕೆ ತರುವ ಮುನ್ನವೆ ಸಭೆಯ

ಕಾರ್ಯಸೂಚಿಯನ್ನು ತಯಾರಿಸಿರುವ ಬಗ್ಗೆ ಸಭೆಗೆ ತಿಳಿಸಿದರು. ಈ ಘಟನೆಯು ಭವಿಷ್ಯದಲ್ಲಿ ಮರುಕಳಿಸದಂತೆ ಮುನ್ನೆಚ್ಚರಿಕೆ ವಹಿಸಲು ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆರವರು ಸೂಚಿಸಿದರು.

**ಅನುಸರಣಾ ವರದಿ**:-

- 181ನೇ ಸಭೆಯ ನಡವಳಿಯ ಅನುಸರಣಾ ವರದಿಯ ಬಗ್ಗೆ ಚರ್ಚಿಸುತ್ತಾ, OTS., ಪದ್ಧತಿಯನ್ನು 31.12.2010ರಿಂದ ವರ್ಷಾಂತ್ಯದ ವರೆಗೆ ಅಂದರೆ 31.03.2011ರವರೆಗೆ ಮುಂದುವರೆಸಲು ತೀರ್ಮಾನಿಸಲಾಯಿತು.

- ಲೋಕಾಯುಕ್ತ ಮೊಕದ್ದಮೆಗಳ ಬಗ್ಗೆ ವಿಮರ್ಶಿಸುತ್ತಾ, ಯಾವ ವಕೀಲರಿಗೆ ಯಾವ ದಿನಾಂಕ ಗಳಂದು ಪ್ರಕರಣ ವಹಿಸಲಾಗಿದೆ? ಸಿ ಓ ಡಿ. ಪ್ರಕರಣಗಳು ಹಾಗೂ ಲೋಕಾಯುಕ್ತ ಟ್ರ್ಯಾಪ್ ಮೊಕದ್ದಮೆಗಳು ಅವುಗಳ ಬಗ್ಗೆ ನಿಗಮ ಯಾವ ಕ್ರಮ ಕೈಗೊಂಡಿದೆ ಎಂಬ ಬಗ್ಗೆ ಚರ್ಚಿಸುತ್ತಾ, ಉದಾ:ಬೆಂಗಳೂರು ನಗರ ಜಿಲ್ಲೆಯಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಯು ಈ ಹಿಂದೆ ನಗರ ಜಿಲ್ಲೆಯಲ್ಲಿಯೇ ಆಟೋರಿಕ್ಷಾ ಯೋಜನೆಯ ದುರ್ಬಳಕೆಯಲ್ಲಿ ಆಗಿರುವ ಅವ್ಯವಹಾರದ ಬಗ್ಗೆ ಸಿ.ಓ.ಡಿ. ತನಿಖೆ ನಡೆಯುತ್ತಿದ್ದು, ತನಿಖೆ ಇನ್ನೂ ಪೂರ್ಣಗೊಂಡಿರುವುದಿಲ್ಲ. ಆದರೂ ಸಹ ಈ ತನಿಖೆಯಲ್ಲಿ ಆಪಾದಿತ ಅಧಿಕಾರಿಯಾದವರನ್ನೇ ಜಿಲ್ಲಾ ವ್ಯವಸ್ಥಾಪಕರಾಗಿ ಅದೇ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವುದು ಹಾಗೂ ಸಿ ಓ ಡಿ.,ಯಿಂದ ವರದಿ ಪಡೆಯಲು ಇವರನ್ನು ನಿಯೋಜಿಸಿರುವುದು ಎಷ್ಟು ಸಮಂಜಸ ಎಂದು ಪ್ರಶ್ನಿಸಲಾಗಿ, ಆ ಅಧಿಕಾರಿಯನ್ನು ಕೂಡಲೇ ಬೇರೆ ಜಿಲ್ಲೆಗೆ ವರ್ಗಾಯಿಸಲು ತೀರ್ಮಾನಿಸಲಾಯಿತು.

- ಶ್ರೀ ಹೆಚ್.ಎಸ್.ಮಹೇಂದ್ರಕುಮಾರ್, ಕಿ.ಸ., ಇವರು ಈ ಹಿಂದೆ ಲೋಕಾಯುಕ್ತ ಪ್ರಕರಣದಲ್ಲಿ ಸಿಲುಕಿದ್ದು, ತದನಂತರ ಕರ್ನಾಟಕ ಉಚ್ಚ ನ್ಯಾಯಾಲಯವು ಅವರನ್ನು ಆರೋಪ ಮುಕ್ತರನ್ನಾಗಿ ಸಿದ್ದರೂ, ಈ ಬಗ್ಗೆ ಕಾನೂನು ಸಲಹೆಗಾರರ ಅಭಿಪ್ರಾಯ ಪಡೆಯುವ ಸಲುವಾಗಿ ವಿಚಾರಣೆ ಜಾರಿಯಲ್ಲಿರುವುದಾಗಿ ತಿಳಿಸಿ, ಅವರಿಗೆ ಸಿಗಬೇಕಾದ ಮುಂಬಡ್ತಿ ಹಾಗೂ ಇತರೇ ಸೌಲಭ್ಯಗಳನ್ನು ತಡೆಹಿಡಿಯಲಾಗಿದೆ. ಆದರೆ, ಶ್ರೀ ಟಿ.ಎಂ.ದೇವೇಗೌಡ, ಜಿ.ವ್ಯ., ಹಾಲಿ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಇವರು ವಿವಿಧ ಜಿಲ್ಲೆಗಳಲ್ಲಿ ಲೋಕಾಯುಕ್ತ ಪ್ರಕರಣದಲ್ಲಿ ಆರೋಪಿತ ಅಧಿಕಾರಿಯಾಗಿದ್ದು, ಇನ್ನೂ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದ್ದರೂ ಸಹ, ಈ ಅಧಿಕಾರಿ ಕೋರಿದಂತೆ ಅಮಾನತ್ತಿನ ಅವಧಿಯನ್ನು ಕರ್ತವ್ಯದ ದಿನಗಳೆಂದು ಪರಿಗಣಿಸಿ, ಬಾಕಿ ವೇತನ ಪಾವತಿಸಿರುವುದು ಎಷ್ಟು ಸಮಂಜಸ? ಭವಿಷ್ಯದಲ್ಲಿ ಇದನ್ನು ಯಾರಾದರು ನ್ಯಾಯಾಲಯದಲ್ಲಿ ಪ್ರಶ್ನಿಸಿದಲ್ಲಿ ನಿಗಮ ಮುಜುಗರಕ್ಕೆ ಒಳಗಾಗುವ ಸಂಭವ ಉಂಟಾಗುತ್ತದೆ. ಆದ್ದರಿಂದ, ಸದರಿ ಅಧಿಕಾರಿಯ ವಿರುದ್ಧ ವಿಚಾರಣೆ ಜಾರಿಗೊಳಿಸಿ, ಭವಿಷ್ಯದಲ್ಲಿ ರಾಜೀನಾಮೆ ನೀಡಿ, ಸ್ವಯಂ ನಿವೃತ್ತಿ ಇಚ್ಛಿಸಿದಲ್ಲಿ ಅವರಿಗೆ ನಿವೃತ್ತಿಯ ನಂತರ ಸಿಗಬೇಕಾದ ಸವಲತ್ತುಗಳನ್ನು ತಡೆಹಿಡಿಯಲು ಹಾಗೂ ಈಗ ಹೊರಡಿಸಿರುವ ಆದೇಶವನ್ನು ರದ್ದುಪಡಿಸಿ, ಅವರ ವಿರುದ್ಧ ಕಾನೂನಿನ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

- 180ನೇ ಮಂಡಳಿ ಸಭೆಯ ನಡವಳಿಯಲ್ಲಿ ಸೂಚಿಸಿರುವಂತೆ ಈ ಕೆಳಕಂಡ ವಿಷಯಗಳ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.
  1) ಬೆಂಗಳೂರು ನಗರ ಜಿಲ್ಲಾ ಕಛೇರಿಯಲ್ಲಿ ಕಡತಗಳು ಕಾಣೆಯಾಗಿರುವ ಬಗ್ಗೆ ಸಿ ಓ ಡಿ., ರವರು ವರದಿ ನೀಡಿದ್ದರೂ, ಸಂಬಂಧಪಟ್ಟವರ ವಿರುದ್ಧ 30 ದಿನಗಳೊಳಗೆ ಕ್ರಮ ಜರುಗಿಸಿ, ತಕ್ಷಣ ಕಡತಗಳನ್ನು ಪತ್ತೆ ಹಚ್ಚಲು ಸೂಚಿಸಲಾಗಿತ್ತು.
  2) ಕೆಲವು ಫಲಾನುಭವಿಗಳು ಸುಳ್ಳು ಜಾತಿ ಪತ್ರಗಳನ್ನು ಸಲ್ಲಿಸಿ ನಿಗಮದಿಂದ ಸಹಾಯಧನ ಪಡೆದಿರುವವರ ವಿರುದ್ಧ ದೌರ್ಜನ್ಯ ಕಾಯ್ದೆಯಡಿ ಮೊಕದ್ದಮೆ ದಾಖಲಿಸಲು ಮತ್ತು ಸಹಾಯಧನವನ್ನು ವಸೂಲಿ ಮಾಡಲು ಸೂಚಿಲಾಗಿತ್ತು.

- ಮಂಡಳಿ ಸಭೆಯ ಸುದೀರ್ಘ ಚರ್ಚೆಯ ನಂತರ ಪ್ರಧಾನ ಕಾರ್ಯದರ್ಶಿಗಳು, ಸಮಾಜಕಲ್ಯಾಣ ಇಲಾಖೆ ಇವರು ಬಾಕಿ ಇರುವ ಎಲ್ಲಾ ಕಾನೂನು ಸೇವಾ ಮೊಕದ್ದಮೆಗಳನ್ನು ಕ್ರೋಢೀಕರಿಸಿ ಮುಂದಿನ ಪ್ರತ್ಯೇಕ ಸಭೆಯಲ್ಲಿ ಮಂಡಿಸಲು ಸೂಚಿಸಿದರು.

- <u>**ವರ್ಗಾವಣೆ ನಿಯಮ**</u>: ವರ್ಗಾವಣೆ ಕಾರ್ಯ ನೀತಿಯನ್ನು ರೂಪಿಸಿ ಮುಂದಿನ ಸಭೆಯಲ್ಲಿ ಮಂಡಿಸಲಾಗುವುದೆಂದು ನಿಗಮದ ವ್ಯವಸ್ಥಾಪಕ ನಿರ್ದೇಶಕರು ಆಶ್ವಾಸನೆ ನೀಡಿದರು.

- ಉಳಿದಂತೆ ಕೈಗೊಳ್ಳಲಾದ ಅನುಸರಣಾ ಕ್ರಮದ ಬಗ್ಗೆ ಸಭೆ ಒಪ್ಪಿಗೆ ನೀಡಿತು.

3) NSCFDC., & NSKFDC., ಸಂಸ್ಥೆಗಳಿಂದ ಪಡೆದಿರುವ ಸಾಲಗಳ ಬಾಬ್ತು ಮರುಪಾವತಿ ಮಾಡುವ ಕುರಿತು:-

- ರಾಷ್ಟ್ರೀಯ ನಿಗಮಗಳಿಂದ ಪಡೆದಿರುವ ಸಾಲವನ್ನು ಸಕಾಲಕ್ಕೆ ನಿಗಮದಿಂದ ಮರುಪಾವತಿ ಮಾಡದ ಕಾರಣ ಹಾಗೂ ಸರ್ಕಾರವು ಸಹ ಖಾತರಿ ನೀಡುತ್ತಿಲ್ಲವೆಂದು ಸದರಿ ಸಂಸ್ಥೆಗಳು ಯೋಜನೆಗಳಿಗೆ ಹಣ ಒದಗಿಸುತ್ತಿಲ್ಲವೆಂದು ತಿಳಿಸಿದ ಕಾರಣ, NSCFDC., ಗೆ ನೀಡಬೇಕಾದ ರೂ.29.07 ಕೋಟಿಗಳ ಪೈಕಿ ರೂ.7.00 ಕೋಟಿಗಳನ್ನು ಹಾಗೂ NSKFDC ರವರಿಗೆ ರೂ.13.65ಕೋಟಿಗಳ ಪೈಕಿ ರೂ.3.00 ಕೋಟಿ ನೀಡುವಂತೆ ತಿಳಿಸಲಾಯಿತು. ಮುಂದುವರೆದಂತೆ NSTFDC ಯಿಂದ ಪಡೆದಿರುವ ಸಾಲವನ್ನು ಸಹ ಮರುಪಾವತಿಸುವ ಬಗ್ಗೆ ಚರ್ಚಿಸುತ್ತಾ, 2005ರ ಹಿಂದೆ ಸೌಲಭ್ಯ ಪಡೆದಿರುವ ಫಲಾನುಭವಿಗಳಿಂದ ಮರುಪಾವತಿಯಾದ ಸಾಲದ ಮೊತ್ತವನ್ನು ಯಾವ ನಿಗಮದ ಖಾತೆಗೆ ಜಮಾ ಆಗುತ್ತಿದೆ ಎಂಬ ಬಗ್ಗೆ ಖಾತರಿಪಡಿಸಿಕೊಳ್ಳಲು, ಹಾಗೂ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದವರು ಪಡೆದ ಸಾಲವನ್ನು ಅವರೇ ಮರುಪಾವತಿಸುವಂತೆ ತೀರ್ಮಾನಿಸಲಾಯಿತು.

4) ರಾಷ್ಟ್ರೀಯ ಪರಿಶಿಷ್ಟಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ ವಿವಿಧ ಯೋಜನೆಗಳಡಿ ನಿಗಮಕ್ಕೆ ಸಾಲ ಮಂಜೂರು ಮಾಡಿ ಲೆಟರ್ ಆಫ್ ಇಂಟೆಂಟ್ ನೀಡಿರುವ ಪ್ರಕರಣಗಳಿಗೆ ಸರ್ಕಾರದ ಖಾತರಿ ನೀಡುವವರೆಗೆ ನಿಗಮದಲ್ಲಿ ಲಭ್ಯವಿರುವ ಹಣವನ್ನು ಉಪಯೋಗಿಸಿಕೊಂಡು ಫಲಾಪೇಕ್ಷಿಗಳಿಗೆ ಸಾಲಸೌಲಭ್ಯ ವಿಸ್ತರಿಸುವ ಕುರಿತು:-

- ರಾಷ್ಟ್ರೀಯ ನಿಗಮದಿಂದ ವಿವಿಧ ಯೋಜನೆಗಳಿಗೆ ಸಾಲ ಮಂಜೂರು ಮಾಡಿ ಲೆಟರ್ ಆಫ್ ಇಂಟೆಂಟ್ ಬಂದಿದ್ದು, ಹಣ ಬಿಡುಗಡೆಯಾಗಿರುವುದಿಲ್ಲ. ಯೋಜನೆಯನ್ನು ಪೂರ್ಣಗೊಳಿಸಲು ಈ ಸಾಲಿನಲ್ಲಿ ಕೇವಲ ಒಂದು ತಿಂಗಳು ಮಾತ್ರ ಬಾಕಿ ಇರುವುದರಿಂದ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸ.ಕ.ಇ.,ರವರು ರೂ.10.00 ಕೋಟಿಗೆ ಸರ್ಕಾರದ ಖಾತರಿ ನೀಡಿರುವುದರಿಂದ, ಪ್ರಸ್ತುತ ನಿಗಮದಲ್ಲಿ ಲಭ್ಯವಿರುವ ಹಣವನ್ನು ಉಪಯೋಗಿಸಿಕೊಂಡು, ಹಣ ಬಂದ ನಂತರ ಅದಕ್ಕೆ ಸರಿದೂಗಿಸಿಕೊಳ್ಳುವಂತೆ ತಿಳಿಸಿದರು. ಹಣ ಬಿಡುಗಡೆಗಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಲಾಯಿತು.

5) ಗಂಗಾಕಲ್ಯಾಣ ಯೋಜನೆಯಡಿ ಕೊಳವೆ ಬಾವಿ ಕೊರೆಯುವಿಕೆಯಲ್ಲಿ ಪ್ರಗತಿ ಕುಂಠಿತವಾಗಿರುವ ಜಿಲ್ಲೆಗಳಲ್ಲಿ ಆಯಾ ಜಿಲ್ಲೆಯ L-1ದರಗಳಲ್ಲಿ ಕೊರೆಯಲು ಬೇರೆ ಗುತ್ತಿಗೆದಾರರನ್ನು ನೇಮಿಸಿಕೊಳ್ಳುವ ಬಗ್ಗೆ:-

- ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆಬಾವಿ ಕೊರೆಯುವಲ್ಲಿ ಪ್ರಗತಿ ಕುಂಠಿತವಾಗಿದ್ದು, ಜಿಲ್ಲೆಗಳಲ್ಲಿ L1 ದರದಲ್ಲಿನ ಕಂಪನಿಗಳು ಕಳೆದ ಸಾಲುಗಳಲ್ಲಿ ಕೊಳವೆಬಾವಿ ಕೊರೆಯದೆ ಬಾಕಿ ಉಳಿಸಿಕೊಂಡು, ಈಗಿನ ದರದಲ್ಲಿ ಕೊಳವೆಬಾವಿ ಕೊರೆಯಲು ಅನುಮತಿ ನೀಡುವಂತೆ ಕೋರುತ್ತಿದ್ದು, ಎಲ್ಲಾ ಕೊಳವೆಬಾವಿ ಕೊರೆಯುವ ಕಂಪನಿಗಳು ಸಹ ಇದೇ ವಾಡಿಕೆ ಮಾಡಿಕೊಳ್ಳುತ್ತಿರುವುದನ್ನು ಗಮನಿಸಲಾಯಿತು. ಇದಕ್ಕೆ ನಿಗಮವು ಪ್ರೋತ್ಸಾಹ ನೀಡದೆ, ಆ ಏಜೆನ್ಸಿಯವರು ಅದೇ ದರದಲ್ಲಿ ಕೊರೆಯಲು ತಿಳಿಸುವುದು ಮತ್ತು ತಪ್ಪಿದಲ್ಲಿ ಆಯಾ ಜಿಲ್ಲೆಗಳಲ್ಲಿ ಕೊಳವೆಬಾವಿ ಕೊರೆದು ಪೂರ್ಣಗೊಳಿಸಿರುವ ಸಂಸ್ಥೆಯು ಬಾಕಿ ಕೊಳವೆಬಾವಿಗಳನ್ನು ಕೊರೆಯಲು ಮುಂದೆ ಬಂದಲ್ಲಿ ಅವರಿಂದಲೇ ಪ್ರಸಕ್ತ ಸಾಲಿನ ದರದಲ್ಲಿ ಕೊರೆಯಿಸಲು ಕ್ರಮ ಕೈಗೊಳ್ಳುವಂತೆ ತೀರ್ಮಾನ ಕೈಗೊಳ್ಳಲಾಯಿತು. ಅಲ್ಲದೆ ಇನ್ನುಮುಂದೆ ಯಾವುದೇ ಕಾರಣಕ್ಕೂ ಬಾಕಿ ಉಳಿಸದಂತೆ ಕ್ರಮ ಜರುಗಿಸಲು ತಿಳಿಸುವುದರ ಜೊತೆಗೆ ಕೊಳವೆಬಾವಿ ಕೊರೆಯುವ ಸಂಸ್ಥೆಗಳು ನಿಗದಿಸಲ್ಪಟ್ಟ ಗುರಿಯನ್ನು ಸಾಧಿಸದಿದ್ದಲ್ಲಿ ಅಂತಹ ಸಂಸ್ಥೆಗಳನ್ನು ಮುಂದಿನ ಟೆಂಡರ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅವಕಾಶವನ್ನು ನೀಡಬಾರದು ಹಾಗೂ ಕೊರೆಯಲು ವಿಫಲರಾದ L1 ದರದಲ್ಲಿನ ಕಂಪನಿಯವರನ್ನು ಕಪ್ಪು ಪಟ್ಟಿಗೆ ಸೇರಿಸಲು ತೀರ್ಮಾನಿಸಲಾಯಿತು.
- ಗುತ್ತಿಗೆದಾರರುಗಳಿಗೆ ಬಿಲ್ ಪಾವತಿಯಲ್ಲಿ ವಿಳಂಬ ಹಾಗೂ ಸಮಯದ ಅಭಾವದಿಂದಾಗಿ ಸಂಸ್ಥೆಯು ಕೊಳವೆಬಾವಿ ಕೊರೆದ ತಕ್ಷಣ ಕೊಳವೆಬಾವಿ ಕೊರೆದ ಬಾಬ್ತಿನಲ್ಲಿ 50%ಕೊಟ್ಟು, ಜಿಲ್ಲೆಗಳಿಂದ ಬಿಲ್ ಬಂದು ಕಡತ ತಯಾರಾದ ನಂತರ ಉಳಿದ ಬಾಬ್ತಿನ ಪೂರ್ಣ ಮೊತ್ತವನ್ನು ಪಾವತಿಸುವ ಬಗ್ಗೆ ಚರ್ಚಿಸಲಾಯಿತು.
- ಕೊಳವೆಬಾವಿ ಕೊರೆಯುವ ಸಂಸ್ಥೆಗಳು ನಿಗದಿತ ಗುರಿಯನ್ನು ಸಾಧಿಸದೆ ನಿಗಮದ ಅನುಷ್ಠಾನಿತ ಯೋಜನೆಗಳ ಪ್ರಗತಿ ಸಾಧನೆಯು ಕುಂಠಿತವಾಗುತ್ತಿರುವುದರಿಂದ ಜಿಲ್ಲಾ ಮಟ್ಟದಲ್ಲಿ ವಿಕೇಂದ್ರೀಕರಣದ ಬಗ್ಗೆ ಚರ್ಚಿಸಲಾಗಿ, ವ್ಯವಸ್ಥಾಪಕ ನಿರ್ದೇಶಕರು ಜಿಲ್ಲಾ ವ್ಯವಸ್ಥಾಪಕರುಗಳ ಕಾರ್ಯವೈಖರಿಯ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದರು. ತತ್ಸಂಬಂಧ ವಿಭಾಗೀಯ ಮಟ್ಟದಲ್ಲಿ ವಿಕೇಂದ್ರೀಕರಣಗೊಳಿಸಿ, ನೋಡಲ್ ಅಧಿಕಾರಿಗಳನ್ನು ಅಂದರೆ ಪ್ರಧಾನ ವ್ಯವಸ್ಥಾಪಕರುಗಳಿಗೆ ಆಯಾ ವಿಭಾಗದ ಸಂಪೂರ್ಣ ಜವಾಬ್ದಾರಿಯನ್ನು ವಹಿಸುವುದರಿಂದ ಪ್ರಗತಿಯನ್ನು ನಿರೀಕ್ಷಿಸಬಹುದು ಹಾಗೂ ತೊಂದರೆಗಳನ್ನು ತಪ್ಪಿಸಬಹುದೆಂದು ನಂತರವಷ್ಟೇ ಯೋಜನೆಗಳ ಅನುಷ್ಠಾನಕ್ಕೆ ವಿಕೇಂದ್ರಿಕರಣ ಜಾರಿಮಾಡಬಹುದು.

- ನಿಗಮದ ಅಧ್ಯಕ್ಷರ ವಿವೇಚನಾ ಕೋಟಾದ ಕೊಳವೆಬಾವಿ ಕೊರೆಯುವ ಗುರಿಯನ್ನು ಮೆ: ಎಸ್ ಪಿ ಇಂಜಿನೀಯರಿಂಗ್ ವರ್ಕ್ಸ್ ಹಾಗೂ ಕೆ ಆರ್ ಡಿ., ಬೋರ್ ವೆಲ್ಸ್‌ರವರಿಗೆ ವಹಿಸಲು ಸೂಚಿಸಿದರು.

6) ಅಂತರ್ಜಲಮಟ್ಟ ಕಡಿಮೆಯಾಗಿರುವ ಜಿಲ್ಲೆಗಳಲ್ಲಿ 600 ಅಡಿಯಿಂದ 1000 ಅಡಿ ಆಳದವರೆಗೆ ಗಂಗಾ ಕಲ್ಯಾಣ ಯೋಜನೆಯಡಿ ಕೊರೆದ ಕೊಳವೆಬಾವಿಗಳಿಗೆ ಹೆಚ್ಚಿನ ಸಾಮರ್ಥ್ಯದ ಪಂಪ್‌ಸೆಟ್ ಗಳನ್ನು ಅಳವಡಿಸುವ ಬಗ್ಗೆ :-

- ಅಂತರ್ಜಲ ಮಟ್ಟ ಕಡಿಮೆಯಾಗಿರುವ ಜಿಲ್ಲೆಗಳಲ್ಲಿ 600 ಅಡಿಯಿಂದ 1000 ಅಡಿಯ ಆಳದವರೆಗೆ ಗಂಗಾಕಲ್ಯಾಣ ಯೋಜನೆಯಡಿ ಕೊರೆದ ಕೊಳವೆಬಾವಿಗಳಿಗೆ ಹೆಚ್ಚಿನ ಸಾಮರ್ಥ್ಯದ ಪಂಪ್ ಸೆಟ್‌ಗಳನ್ನು ಅಳವಡಿಸುವಲ್ಲಿ ನಿಗಮದ ಘಟಕವೆಚ್ಚದ ಮಿತಿ ಮೀರಿದಲ್ಲಿ ಫಲಾನುಭವಿ-ಗಳು ಭರಿಸುತ್ತಿರುವುದು ಚಾಲ್ತಿಯಲ್ಲಿದೆ ಆದರೆ ಪ್ರಸ್ತುತದಲ್ಲಿ ಅವ್ಯವಹಾರ ಜರುಗುತ್ತಿರುವುದನ್ನು ಗಮನಿಸಲಾಗಿ, ಫಲಾನುಭವಿ ಭರಿಸಿದ ಮೊತ್ತಕ್ಕೆ ರಸೀದಿಯನ್ನು ಹಾಕಲು ತಿಳಿಸಿದರು ಹಾಗೂ ಅಂತರ್ಜಲ ಮಟ್ಟ ಕಡಿಮೆಯಾಗಿರುವ ಜಿಲ್ಲೆಗಳಲ್ಲಿ ಹೆಚ್ಚಿನ ಸಾಮರ್ಥ್ಯದ ಪಂಪ್ ಸೆಟ್ ಅಳವಡಿಕೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲು ಸೂಚಿಸಿದರು.

7) 2009ನೇ ಸಾಲಿನ ಅಕ್ಟೋಬರ್ ಮಾಹೆಯಲ್ಲಿ ರಾಯಚೂರು ಜಿಲ್ಲೆಯಲ್ಲಿ ಬಿದ್ದ ಭಾರಿ ಮಳೆಯಿಂದಾಗಿ ಸಂತ್ರಸ್ಥರಾದ 56 ಕುಟುಂಬಗಳಿಗೆ ನಿಗಮದ ನೇರಸಾಲ ಹೈನುಗಾರಿಕೆ ಯೋಜನೆಯಡಿ ಸಾಲ ಸೌಲಭ್ಯ ಮಂಜೂರು ಮಾಡುವ ಬಗ್ಗೆ :-

- ರಾಯಚೂರು ಜಿಲ್ಲೆ , ರಾಯಚೂರು ಗ್ರಾಮೀಣ ವಿಧಾನ ಸಭಾ ಕ್ಷೇತ್ರದ, ಚಿಕ್ಕಸಗೂರು, ಸಿಂಗನೊಡಿ, ಏಗನೂರು, ಮಾಸದೊಡ್ಡಿ, ಹುಗನಹಳ್ಳಿ, ಇಬ್ರಾಹಿಂ ದೊಡ್ಡಿ, ಜುಲಮನಗರ, ರಾಯಚೂರು ನಗರದ ಕೆಲ ಪ್ರದೇಶಗಳ 56 ಕುಟುಂಬಗಳು ಅತಿವೃಷ್ಟಿ ವಿಕೋಪಕ್ಕೊಳಗಾಗಿ ಸಂತ್ರಸ್ಥರಾಗಿದ್ದು, ಇವರ ಜೀವನೋಪಾಯಕ್ಕಾಗಿ ನಿಗಮದ ನೇರಸಾಲ ಹೈನುಗಾರಿಕೆ ಯೋಜನೆಯಡಿ ತಲಾ 02ಹಸುಗಳ ಘಟಕಕ್ಕೆ ಮಂಜೂರಾತಿ ನೀಡಲು ನಿಗಮದಲ್ಲಿರುವ ಅನುದಾನದಿಂದ ಭರಿಸಲು ತಿಳಿಸಿದರು.

8) ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕು ಅಂಕನಹಳ್ಳಿಗ್ರಾಮದಲ್ಲಿ ಸಾಮಾಜಿಕ ಬಹಿಷ್ಕಾರಕ್ಕೊಳಗಾದ ಪರಿಶಿಷ್ಟ ಜಾತಿಯ ಕುಟುಂಬಗಳಿಗೆ ನಿಗಮದಿಂದ ಸಾಲ ಸೌಲಭ್ಯ ಹಾಗೂ ಇನ್ನಿತರೆ ಯೋಜನೆಗಳನ್ನು ಅನುಷ್ಠಾನಗೊಳಿಸುವ ಬಗ್ಗೆ:-

- ದಿನಾಂಕ:02.09.2010ರಂದು ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆತಾಲ್ಲೂಕು ಅಂಕಹಳ್ಳಿ ಗ್ರಾಮದಲ್ಲಿ ಸವರ್ಣೀಯರಿಂದ ಪರಿಶಿಷ್ಟ ಜಾತಿ ಜನರ ಮೇಲೆ ಸಾಮಾಜಿಕ ಬಹಿಷ್ಕಾರ ಹಾಗೂ ದೌರ್ಜನ್ಯಕ್ಕೊಳಗಾದ 364 ಪರಿಶಿಷ್ಟ ಜಾತಿಯ ಕುಟುಂಬಗಳಿಗೆ ನಿಗಮ ಅನುಷ್ಠಾನಗೊಳಿಸು ತ್ತಿರುವ ಯೋಜನೆಗಳಾದ ಹೈನುಗಾರಿಕೆ ಹಾಗೂ ಇತರೆ ಉದ್ದೇಶಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಸಹಾಯಧನ ಪಡೆದು ನಿಗಮದಿಂದ ಸಾಲ ಮಂಜೂರು ಮಾಡಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆರವರು ಸಹಾಯಧನ ಮಂಜೂರು ಮಾಡಲು ಒಪ್ಪಿಗೆ ನೀಡಿರುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ಘಟಕವೆಚ್ಚ ರೂ.1.00ಲಕ್ಷದ